<u>ಸಾಕ್ಷಿಗೆ ದಿನಾಂಕ *04-04-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ. ಐ ಎಸ್ ವಾಯ್. ವಕೀಲರಿಂದಃ</u>

ಲಾರಿಯು ಅಪಘಾತ ಪಡಿಸಿರುತ್ತದೆ. ಲಾರಿ ನಂಬರ ನೆನಪಿರುವುದಿಲ್ಲ. 2 ನೇ ಎದರುದಾರರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ವಿಮೆಯನ್ನು ಕ್ಲೇಮ್ ಮಾಡುತ್ತಿರುವುದರಿಂದ ಅವರನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದು ಹೇಳುತ್ತಾರೆ. 2 ನೇ ಎದರುದಾರರ ವಿಮೆ ಇರುವ ಬಗ್ಗೆ ಯಾವುದೇ ದಾಖಲೆಯನ್ನು ತೆಗೆದುಕೊಂಡಿರುವುದಿಲ್ಲ. 1 ಮತ್ತು 2 ನೇ ಎದರುದಾರರ ಮದ್ಯ ವಿಮೆ ಒಪ್ಪಂದ ಇರುವ ಬಗ್ಗೆ ಯಾವುದಾದರೂ ದಾಖಲೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿದಾರರು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. 1 ಮತ್ತು 2 ನೇ ಎದರುದಾರರ ಮದ್ಯ ವಿಮೆ ಒಪ್ಪಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಲಾರಿ ವಾಹನದ ಮಾಲೀಕನನ್ನು ಭೇಟಿ ಆಗಿರುವುದಿಲ್ಲ. ಲಾರಿ ವಾಹನದ ಮಾಲೀಕನಿಗೆ ಪೋನ ಮಾಡಿರುತ್ತೇನೆ ಮತ್ತು ಅವರು ನನಗೆ ಲಾರಿಗೆ ವಿಮೆ ಇರುತ್ತದೆ ನೀವು ಕ್ಲೇಮ್ ಮಾಡಿಕೊಳ್ಳಿ ಎಂದು ಹೇಳಿರುತ್ತಾರೆ. 1 ಮತ್ತು 2 ನೇ ಎದರುದಾರರ ನಡುವೆ ವಿಮೆ ಒಪ್ಪಂದ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿ ಮಾಲೀಕರಿಂದ ವಿಮೆ ಪತ್ರವನ್ನು ತೆಗೆದುಕೊಂಡು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. ವಿಮೆ ಒಪ್ಪಂದ ಇರದೇ ಇರುವುದರಿಂದ 1 ನೇ ಎದರುದಾರರು ಮಾನ್ಯ ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಎದರುದಾರರ ನಡುವೆ ವಿಮೆ ಒಪ್ಪಂದ ಇರದೇ ಇರುವುದರಿಂದ 2 ನೇ ಎದರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನಾವು ಪ್ರಭು ಪಟ್ಟಣಶೆಟ್ಟಿಯವರ ವಾರಸುದಾರರು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನೂ ಕೂಡ ಪ್ರಭು ಪಟ್ಟಣಶೆಟ್ಟಿಯವರ ಜೊತೆ ಹೋಗಿದ್ದೆ. ಹೊಸ ದ್ವಿಚಕ್ರ ವಾಹನವನ್ನು ತೆಗಕೆದುಕೊಂಡ ನಂತರ ಅದನ್ನು ಪ್ರಭು ರವರು ಚಲಾಯಿಸುತ್ತಿದ್ದರು ಮತ್ತು ನಾನು ಇನ್ನೊಂದು ಬೈಕಿನಲ್ಲಿ ಬರುತ್ತಿದ್ದೇನು. ಅಪಘಾತ ಜಾಗೆಯಲ್ಲಿ ಹಂಪ್ಸಗಳು ಇದ್ದವು . ಹಂಪ್ಸ ದಾಟುವಾಗ ಪ್ರಭುರವರು ಆಯ ತಪ್ಪಿ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಪ್ರಭುರವರಿಗೆ ಅಪಘಾತದಲ್ಲಿ ತೀವ್ರಸ್ವರೂಪದ ಗಾಯಗಳಾಗಿರುತ್ತವೆ ಮತ್ತು ಸದರಿ ಗಾಯಗಳಿಂದ ಮೃತ ಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಭುರವರ ಶವ ಸಂಸ್ಕಾರಕ್ಕೆ 50 ಸಾವಿರ ರೂ.ಗಳು ಖರ್ಚಾಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಭುರವರಿಗೆ 26 ರಿಂದ 27 ವರ್ಷ ವಯಸ್ಸು ಇತ್ತು. ಪ್ರಭುರವರು ಖಾಸಗಿ ಶಿಕ್ಷಕ ಇದ್ದರು ಎಂದು ಮತ್ತು ಅವರಿಗೆ ತಿಂಗಳಿಗೆ 25 ಸಾವಿರ ರೂ.ಗಳು ವರಮಾನ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಪ್ರಭುರವರು ನಮ್ಮ ಮನೆಯನ್ನು ನಡೆಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರದ ಹಣಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.

HANAMANTARAO R KULKARNI

Digitally signed by HANAMANTARAO R KULKARNI
Date: 2025.04.04 13:35:36 +0530